OS No. 90/2020
PW-1 ತಿಪ್ಪೇಸ್ವಾಮಿ
Date: 15.01.2025

<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>**ಪಾಟೀ ಸವಾಲು 6 ನೇ ಪ್ರತಿವಾದಿ ಪರ ವಕೀಲರಿಂದಃ**</u>

ನಾನು ನನ್ನ ತಂದೆ ಮತ್ತು ನನ್ನ ಸಹೋದರರು 1982 ರಲ್ಲಿ ಪಾಲುವಿಭಾಗ ಮಾಡಿಕೊಂಡಿದ್ದೆವು ಎಂದರೆ ಸರಿ. ಸದರಿ ಪಾಲುವಿಭಾಗ ದಲ್ಲಿ ಸನಂ.25/ಪಿ ಜಮೀನು ನನ್ನ ತಮ್ಮ ಶಿವಣ್ಣ ರವರಿಗೆ ಬಂತು ಎಂದರೆ ಸರಿ. ತದನಂತರ ಸದರಿ ಜಮೀನಿನ ಖಾತೆ ಬದಲಾವಣೆಯನ್ನು ಶಿವಣ್ಣ ರವರು ತಮ್ಮ ಹೆಸರಿನಲ್ಲಿ ಮಾಡಿಸಿಕೊಂಡು ಸದರಿ ಜಮೀನಿನ ಸ್ವಾದೀನದಲ್ಲಿ ಇದ್ದರು ಎಂದರೆ ಸರಿ. ಸದರಿ ಜಮೀನನ್ನು ಅವರೆ ಉಳುಮೆ ಮಾಡುತ್ತಿದ್ದರು ಎಂದರೆ ಸರಿ. ಸದರಿ ಜಮೀನನ್ನು ದಿನಾಂಕ 26.04.2002 ರಂದು ಖರೀದಿ ಮಾಡಿರುತ್ತೇನೆ ಎಂದರೆ ಸರಿ. ಶಿವಣ್ಣ ರವರ ಹೆಂಡತಿ ಮತ್ತು ಮಕ್ಕಳು ಜಂಟಿಯಾಗಿ ನನ್ನ ಹೆಸರಿಗೆ ಸದರಿ ಜಮೀನಿನ ಕ್ರಯ ಪತ್ರವನ್ನು ಮಾಡಿಸಿಕೊಟ್ಟರು ಎಂದರೆ ಸರಿ. ಆ ಪ್ರಕಾರ ನನ್ನ ಹೆಸರಿಗೆ ಸದರಿ ಜಮೀನಿನ ಖಾತೆ ವರ್ಗಾವಣೆಯಾಗಿ ಪಹಣಿ ನನ್ನ ಹೆಸರಿಗೆ ಬಂತು ಎಂದರೆ ಸರಿ. ಸದರಿ ಬೆದ್ದಲು ಜಮೀನನ್ನು ನಾನು ನೀರಾವರಿ ಜಮೀನಾಗಿ ಪರಿವರ್ತನೆ ಮಾಡಿದೆನು. ಸದರಿ ಜಮೀನಿಗೆ ವಿದ್ಯುತ್ ಸಂಪರ್ಕವನ್ನು ಪಡೆದುಕೊಂಡೆನು. ಸದರಿ ಜಮೀನಿನಲ್ಲಿ ನಾನು ಈರುಳ್ಳಿ, ಮೆಕ್ಕೆಜೋಳ, ರಾಗಿ ಮತ್ತು ಭತ್ತವನ್ನು ಬೆಳೆಯುತ್ತಿದ್ದೆನು. ತದನಂತರ ಸದರಿ ಜಮೀನನ್ನು ನಾನು ದಿನಾಂಕ 25.02.2022 ರಲ್ಲಿ ಮಾರಾಟ ಮಾಡಿದೆನು ಎಂದರೆ ಸರಿ. ಸದರಿ ಕ್ರಯ ಪತ್ರವನ್ನು ನಾನು ನನ್ನ ಹೆಂಡತಿ ಮತ್ತು ಮಕ್ಕಳು ಒಟ್ಟಾಗಿ 6 ನೇ ಪ್ರತಿವಾದಿ ಹೆಸರಿನಲ್ಲಿ ಮಾಡಿಕೊಟ್ಟೆವು ಎಂದರೆ ಸರಿ. ಖರೀದಿಯ ನಂತರ 6 ನೇ ಪ್ರತಿವಾದಿಯೇ ಸದರಿ ಜಮೀನಿನ ಸ್ವಾದೀನದಲ್ಲಿ ಇದ್ದಾರೆ ಎಂದರೆ ಸರಿ. 6 ನೇ ಪ್ರತಿವಾದಿ ಸದರಿ ಜಮೀನಿನಲ್ಲಿ ನೀರಾವರಿ ಸೌಲಭ್ಯವನ್ನು ಮಾಡಿಸಿಕೊಂಡು ಅಡಿಕೆ ಬೆಳೆಯನ್ನು ಬೆಳೆಯುತ್ತಿದ್ದಾರೆ ಎಂದರೆ ಸರಿ. ಸದರಿ ಜಮೀನಿನ ಮಾಲೀಕರು ಮತ್ತು ಹಕ್ಕುದಾರರು 6 ನೇ ಪ್ರತಿವಾದಿಯೇ ಆಗಿದ್ದಾರೆ ಎಂದರೆ ಸರಿ. ಉಳಿದ ಪ್ರತಿವಾದಿಗಳಿಗೆ ಸದರಿ ಜಮೀನಿನಲ್ಲಿ ಹಕ್ಕು ಇರುವುದಿಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್?ಸಿ., ಚಳ್ಳಕೆರೆ.